ಶೀಟ್‌ಗಳನ್ನು ಯಾರಿಂದ ಕೊಂಡುಕೊಳ್ಳಲಾಯಿತು ಎಂಬ ಬಗ್ಗೆ ಇಲ್ಲಿ ಕೊಟ್ಟಿರುವ ಸಂಸ್ಥೆಗಳ ಹೆಸರುಗಳನ್ನು ನೋಡಿದಾಗ, ಈ ಹೆಸರಿನ ಸಂಸ್ಥೆಗಳೇ ಅಲ್ಲಿ ಇಲ್ಲ. ಈ ಹೆಸರುಗಳು ಇರುವ ಬೋರ್ಡುಗಳು ಮಾತ್ರ ಅಲ್ಲಿವೆಯೇ ಎಂಬ ಬಗ್ಗೆ ನನಗೆ ವಿಚಿತ ಮಾಹಿತಿ ಬೇಕಾಗಿದೆ.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ, ಪ್ರಶ್ನೆ ಕೇಳಿ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಅದಕ್ಕೆ ಇದರಲ್ಲಿ ೭ ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳ್ತಾ ಇದ್ದಾರೆ, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಬಿಡಿಓ ಮನೆಗಳ ಮೇಲೆ ಜಿಂಕ್ ಶೀಟ್ಸ್ ಇದೆ. ಅವರ ಮನೆ ಮೇಲೆ ಎಷ್ಟಿದೆ ಎಂದು ಏನಾದರೂ ಮಾಹಿತಿ ಇದೆಯೇ ಇದರಲ್ಲಿ ಅಥವಾ ಅವನ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ, ಅದರ ಬಗ್ಗೆ ಸರಿಯಾದ ಮಾಹಿತಿ ಕೊಡಬೇಕಾಗಿದೆ.

ಶ್ರೀ ಮಹಮ್ಮದ್ ಮೋಹಿನುದ್ದೀನ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ನೀಡಲಾಗಿದೆ ಸ್ವಾಮಿ. ಬೇನಾಮಿ ಎಷ್ಟಾಗಿದೆ. ಏನಾಗಿದೆ ಎಂದು ಅವರು ಪ್ರಶ್ನೆ ಕೇಳಿಲ್ಲ. ಆದ್ದರಿಂದ ಅದಕ್ಕೆ ಉತ್ತರ ಇಲ್ಲ, ಅಂಥಾದ್ದು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಹಾಗೆಯೇ ೪೫೦೬ ಮನೆಗಳಲ್ಲಿ ೩೭೧೬ ಮನೆಗಳು ಕಂಪ್ಲೀಟಾಗಿದೆ. ೩೨೦೪ ಮನೆಗಳು ಆಕ್ಯುಪೈ ಆಗಿದೆ. ಉಳಿದ ಪೈಕಿ ೧೬೩೩ ಪ್ರಾಪರ್ ಬೆನಿಫಿಷರೀಸ್ ಆಕ್ಯುಪೈ ಆಗಿದೆ ಬ್ಯಾಲೆನ್ಸ್ ೧೫೬೪ ಇದ್ದದ್ದು ಪ್ರಾಪರ್ ಬೆನಿಫಿಷರೀಸ್ ಆಕ್ಯುಪೈ ಮಾಡಿಲ್ಲ ಎಂದು ಅದರ ಮೇಲೆ ಲೋಕಾಯುಕ್ತಕ್ಕೆ ರೆಫರ್ ಮಾಡಲಾಗಿದೆ. ಲೋಕಾಯುಕ್ತ ದಿಂದ ಫೈಂಡಿಂಗ್ಸ್ ಬಂದನಂತರ ಬೇಕಾದರೆ ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಯಾವ ಯಾವ ವಿಷಯದ ಬಗ್ಗೆ ಲೋಕಾಯುಕ್ತಕ್ಕೆ ಬರೆದಿದ್ದೀರಿ ಮತ್ತು ಲೋಕಾಯುಕ್ತಕ್ಕೆ ಬರೆಯುವಾಗ ೫೪೬ ಮನೆಗಳು ದುಸ್ಥಿತಿಯಲ್ಲಿವೆ ಎಂದು ಹೇಳಿದ್ದೀರಿ ಈ ಮನೆಗಳು ದುಸ್ಥಿತಿಯಲ್ಲಿ ಏಕೆ ಬಂತು, ಇದಕ್ಕೆ ಕಾರಣಗಳೇನು ? ಲೋಕಾಯುಕ್ತಕ್ಕೆ ಏನು ಬರೆದಿದ್ದೀರಿ ಎನ್ನುವುದರ ಬಗ್ಗೆ ಖಚಿತವಾದಂಥ ಮಾಹಿತಿ ಕೊಡಿ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಲೋಕಾಯುಕ್ತಕ್ಕೆ ನಾವು ರೆಫರ್ ಮಾಡಿದ್ದೇವೆ. ಬೈಲಪ್ಪ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಆಫ್ ಸಂತಾಪುರ, ಅವರ ಕಾಲದಲ್ಲಿ ಆಗಿರುವ ಇರೆಗ್ಯುಲಾರಿಟೀಸ್ ಎಷ್ಟು ಜಿಂಕ್ ಶೀಟ್ಸ್ ಕೊಂಡುಕೊಂಡಿದ್ದಾರೆ ಅವೆಲ್ಲಾ ಮಾಹಿತಿ ಬಗ್ಗೆ ಲೋಕಾಯುಕ್ತಕ್ಕೆ ರೆಫರ್ ಮಾಡಲಾಗಿದೆ. ಲೋಕಾಯುಕ್ತದವರು ಫೈಂಡಿಂಗ್ಸ್ ಕೊಟ್ಟನಂತರ ಅದರ ಮೇಲೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಂಗಪ್ಪ ತಿಂದು ಹಾಕಿದ್ದು ಬೇಕಾದಷ್ಟು ಇದೆ. ಸಂಗಪ್ಪನ ಮೇಲೆ ಏನೂ ಮಾಡಿಲ್ಲ. ಅದಕ್ಕೆ ಸಂಗಪ್ಪನ ಮೇಲೆ ಕೂಡ ಲೋಕಾಯುಕ್ತಕ್ಕೆ ಬರೆಯುತ್ತೀರಾ? ಸಂಗಪ್ಪನ ಮೇಲೆ ಲೋಕಾಯುಕ್ತಕ್ಕೆ ಬರೆದು ಎಷ್ಟು ಪಂಚೆಗಳು ಮಾಡಿದೆ, ಅವನ ಮನೆಗಳ ಮೇಲೆ ಎಷ್ಟು ಜಿಂಕ್‌ಶೀಟ್ಸ್ ಇದೆ ಎಂದು ಪರಿಶೀಲಿಸಿದ್ದೀರಾ ? ಲೋಕಾಯುಕ್ತಕ್ಕೆ ಬರೆಯುತ್ತೀರಾ ಎನ್ನುವುದನ್ನು ಖಚಿತವಾಗಿ ಹೇಳಬೇಕು.

ಶ್ರೀ ಮಹಮ್ಮದ್ ಮೋಯಿನುದ್ದೀನ್.—ಮಾನ್ಯ ಸದಸ್ಯರು ಈಗ ಇನ್‌ಫರ್ಮೇಷನ್ ಕೊಟ್ಟಿದ್ದಾರೆ. ಆ ಇನ್‌ಫರ್ಮೇಷನ್ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಲಾಗುವುದು.

ನಂಜನಗೂಡಿನಲ್ಲಿ ಇರುವ ಕೊಳವೆಬಾವಿಗಳು

೧೫೫೩. **ಶ್ರೀ ಡಿ. ಟಿ. ಜಯಕುಮಾರ್** (ನಂಜನಗೂಡು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ವಕ್ಫ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫ರ ಮುನ್ನ ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳಿದ್ದವು ?

ಆ) ೧೯೮೫–೮೫, ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ ಕೊರೆಸಿರುವ ಬಾವಿಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್‌ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ , ವಕ್ಫ್ಸ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಹೌದು

ಆ)

೧೯೮೪–೮೫	೧೧೪	ಕೊಳವೆ ಬಾವಿಗಳು
೧೯೮೫–೮೬	೭೦	,,
೧೯೮೬–೮೭	೫೬	,,
೧೯೮೭–೮೮	೬೮	,,

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅತ್ಯಂತ ಜನ ಮೆಚ್ಚುಗೆ ಕೆಲಸ ಅಂದರೆ ಕೊಳವೆ ಬಾವಿಗಳಿಂದ ನೀರನ್ನು ಕೊಟ್ಟಿರತಕ್ಕಂಥಾದ್ದು ಈ ಕೊಳವೆ ಬಾವಿಗಳಿಂದ ನೀರನ್ನು ಕೊಟ್ಟಿರುವುದರಿಂದ ಬಹುಶ: ನಮ್ಮನ್ನು, ಜನತಾ ಸರ್ಕಾರವನ್ನು ಡಾಕ್ಟರ್ಸ್ ಎಲ್ಲಾ ಬಯ್ಯುತ್ತಾ ಇದ್ದಾರೆ. ಏಕೆಂದರೆ, ಈ ಕೊಳವೆ ಬಾವಿಗಳ ನೀರು ಅಷ್ಟು ಪರಿಶುದ್ಧವಾದ ನೀರು ಆದುದರಿಂದ ವಂಕ್ಕೆಗೆ ಬರುವ ಸಾಮಾನ್ಯವಾದಂಥ ಕಾಯಿಲೆ ಕಾಲಾರ, ಮಲೇರಿಯಾ, ವಿಷಮಶೀತಜ್ವರ ಇವೆಲ್ಲಾ ನಿಂತು ಹೋಗಿದೆ. ಆದರೆ ಇವತ್ತು ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಕೊಳವೆಬಾವಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅದನ್ನು ದುರಸ್ತಿ ಮಾಡಲಿಕ್ಕೆ ಮೊಬೈಲ್ ಯೂನಿಟ್ಸ್ ಎಂದು ಇದೆ, ಅವರನ್ನು ಯಾವಾಗ ಕೇಳಿದರೂ ನಮಗೆ ಡೀಸಲ್ ಇಲ್ಲ, ಸ್ಪೇರ್‌ಪಾರ್ಟ್ಸ್ ಇಲ್ಲ ಎನ್ನತಕ್ಕಂಥ ಕಂಪ್ಲೈಂಟ್ ಹೇಳುತ್ತಾ ಇದ್ದಾರೆ. ನಾವು ಕೊಳವೆ ಬಾವಿ ಕೊಟ್ಟಿದ್ದೇವೆ, ಕೊಟ್ಟಿರುವುದಕ್ಕೆ ತಕ್ಕಹಾಗೆ ನೀರಿನ ಉಪಯೋಗವನ್ನು ಪಡೆದುಕೊಳ್ಳತಕ್ಕಂಥ ಸೌಲಭ್ಯವನ್ನು ನಾವು ಒದಗಿಸದೇ ಹೋದರೆ ಬಹುಶ: ನಮ್ಮ ಹೇಳಿಕೆಯಲ್ಲಿ ವ್ಯತ್ಯಾಸವಾಗುತ್ತದೆ. ಆದುದರಿಂದ ಆತ್ಯಕಡೆ ಹೆಚ್ಚು ಗಮನ ಕೊಡಬೇಕು ಆದನ್ನು ರೀಪೆರಿ ಮಾಡಿಸಲಿಕ್ಕೆ ಹೆಚ್ಚು ಆದ್ಯತೆ ಕೊಡಬೇಕು ಎಂದೂ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ, ಅಗತ್ಯವಾಗಿ ಮಾಡೋಣ.

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೆ, ಹಳ್ಳಿಗಾಡಿನಲ್ಲಿ ನಾವು ಕೊಳವೆಬಾವಿಗಳನ್ನು ಕೊಟ್ಟಿದ್ದೇವೆ. ಪಟ್ಟಣ ಪ್ರದೇಶಗಳಲ್ಲೂ ಕೂಡ ಇಂತಹ ಕೊಳವೆಬಾವಿಗಳು ಎಲ್ಲಿ ಅವಶ್ಯಕತೆ ಇರುತ್ತದೆ ಅಲ್ಲಿ ಸಬ್‌ಮರ್ಸಿಬಲ್ ಪಂಪ್ ಎಂದು ಹಾಕುತ್ತಾ ಇದ್ದಾರೆ. ಅಲ್ಲೂ ಕೂಡ ಹೆಚ್ಚಿನ ಆದ್ಯತೆ ಕೊಡಬೇಕು. ನಾನು ಮೊದಲು ಒಂದು ಸಾರಿ ನಂಜನಗೂಡು ತಾಲ್ಲೂಕಿನ ಬಗ್ಗೆ ಹೇಳಿದೆ. ನಂಜನಗೂಡು ಪಟ್ಟಣದಲ್ಲಿ ಅತಿ ಪಕ್ಕದಲ್ಲಿ ನದಿ ಇದ್ದರೂ ಕೂಡ ನಮಗೆ ಸಾಕಷ್ಟು ನೀರಿನ ಸೌಲಭ್ಯವಿಲ್ಲ. ಕೆಲವು ಕಡೆ ಸಬ್ ಮರ್ಸಿಬಲ್ ಪಂಪ್ ಕೊಟ್ಟು ನೀರನ್ನು ಕೊಡಬೇಕು ಎಂದು ಹೇಳಿದ್ದ ಮಾನ್ಯ ಸಚಿವರಿಗೆ ಇದು ಸುಮಾರು ಬಾರಿ ಒತ್ತಾಯ ತರುತ್ತಾ ಇರುವುದು ಇದ್ದರಿಂದ ಇನ್ನು ಮುಂದಾದರೂ ಕೂಡ ಅದರ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಅದಕ್ಕೆ ಆದ್ಯತೆ ಕೊಡಬೇಕು ಎಂದೂ ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ.

ಕನಕಗಿರಿಯಲ್ಲಿ ಕುಡಿಯುವ ನೀರಿನ ಸರಬರಾಜು

೨೩೦ ಶ್ರೀ ರಂಗ ದೇವರಾಯಲು (ಕನಕಗಿರಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ಸ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಷ್ಟಗಿ ತಾಲ್ಲೂಕಿನ ಕಲವಂಳ್ಳಿ ಹಾಗೂ ಮೇಣದಾಳು, ಗಂಗಾವತಿ ತಾಲ್ಲೂಕಿನ ಕಾರಟಗಿ, ಮರುಲಹಳ್ಳಿ ಹಾಗೂ ಕನಕಗಿರಿ ಮತ್ತು ಸಿಂಧನೂರು ತಾಲ್ಲೂಕಿನ ತುರುವೀಹಾಳ್ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕೆಲಸ ಸಮರ್ಪಕವಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;